ಆಗಿರುತ್ತಿತ್ತು. ತನ್ನ ಹೆಸರು ದೊಡ್‌ಈರಯ್ಯ. ಮತ್ತೊಬ್ಬ ದೊಡ್‌ಈರಯ್ಯನಿದಾನೆ ಕೇರಿಯಲ್ಲಿ. ತಾನೇ ಅವನು ಅಂತೆಲ್ಲ ಗೊಂದಲವಾಗಿ, ಸಾಧಿಸಿ ರೇಶನ್ ಕಾರ್ಡು ಪಡೆಯಲು ಸಾಹಸ ಪಟ್ಟಾಗಿತ್ತು. ಅವನು ಯಾವಾಗಲೂ ಕೋಲು ಹಿಡಿದುಕೊಂಡು ಇರುತ್ತಿದ್ದಕ್ಕೆ ಕೋಲುದೊಡ್ಡೀರ್ಯ; ತಾನು ಗದ್ದೆದೊಡ್ಡೀರ್ಯ. ಪತ್ತೆ ಹಚ್ಚುವುದು ಹೀಗೇ. ಹೀಗೆ ಹುಂಜದ ಗುಬ್ಬವ್ವ, ಕುರಿ ಗುಬ್ಬವ್ವ, ಗಡ್ಡದ ಸಿಂಗ್ಯ, ನುಣ್ಣನ್ ಸಿಂಗ್ಯ... ಇದಾರೆ ಕೇರಿಯಲ್ಲಿ! ತನಗೆ ಹುಟ್ಟೋ ಮಗೀಗೆ ಸಿನೇಮಾದ ಹೆಸರಿಡಬೇಕು ಅಂದುಕೊಂಡಿದ್ದ.

ಚೌಡವ್ವನ ಮರದ ಹತ್ತಿರ ಆಗಲೇ ಗಂಗಿ ಮನೆಯವರು ಕಾಯುತ್ತಿದ್ದರು. ‘ದೊಡ್ಡೀರಣ್ಣ ಬಂದ. ಸುಗಣಿ ಕರದು ಅವನ ಸಾಮಾನು ತರಾಕ್‌ಹೇಳು’ ಗಂಗಿ ತಾಯಿ ಹೇಳಿದ್ದಕ್ಕೆ ಕರೆಮಲ್ಲಿ ‘ಯಾವ ಸುಗಣೀ?...’ ಅಂತ ಕೇಳಿದಳು. ‘ಐ... ನಿನ್! ದೊಡ್‌ಎದೆ ಸುಗಣಿ... ದೊಡ್ಡೀರಣ್ಣನ್ ಹೆಂತಿ’ ಅಂತ ಗಡಬಡೆ ಮಾಡಿದ್ದು ಮರವನ್ನು ಸಮೀಪಿಸುತ್ತಿದ್ದವನಿಗೆ ಕೇಳಿಸಿತು. ಅವನು ಚಿಕ್ಕವನಿದ್ದಾಗಲೇ ನೂರಾರುವರ್ಷ ಹಳೆಯದೆಂದು ಹೇಳುತ್ತಿದ್ದ ಮರ ಅದು. ಆಲ, ಅರಳಿ ಒಂದಕ್ಕೊಂದು ನುಲಿದುಕೊಂಡು ಹಕ್ಕಿಪಕ್ಕಿಗಳಿಂದಾಗಿ ಯಾವ್ಯಾವುದೋ ಜಾತಿ ಗಿಡಗಳೆಲ್ಲ ಅದರಲ್ಲಿ ಉದ್ಭವಿಸಿ ಜಡಕಾಗಿ ಬೃಹದಾಕಾರದಲ್ಲಿ ವ್ಯಾಪಿಸಿಕೊಳ್ಳುವುದು ಇನ್ನೂ ನಡೆದೇ ಇತ್ತು. ಅದರ ಬೊಡ್ಡೆಗೆ ತಾಗಿ ಒಂದು ಬಂಡೆಗೆ ಹಬ್ಬದಲ್ಲಿ, ಕಾರ್ತೀಕದಲ್ಲಿ ಎಣ್ಣೆ ಕುಂಕುಮ ಬಳಿಯುತ್ತಲೇ ಬಂದಿದ್ದಕ್ಕೆ ಬಂಡೆ ಫಳಫಳ ಹಲವು ಬಣ್ಣಗಳಲ್ಲಿ ಹೊಳೆಯುತ್ತ ಅದರಲ್ಲಿ ಚೌಡವ್ವನು ವಾಸಿಸುತ್ತಿದ್ದಿದ್ದಕ್ಕೆ ಕೇರಿಯವರ ಭಯ ಭಕ್ತಿಯಲ್ಲಿ ದೈವಿಕತೆ ಮೆರೆಯುತ್ತಿತ್ತು.

> ‘ ಈ ಸುಖವೆಂಬುದು ವಿವರಣೆಗಾಗಲಿ, ವಿಚಾರಕ್ಕಾಗಲಿ ದಕ್ಕದ ವಸ್ತುವೆನಿಸಿತ್ತು. ಅದೆಲ್ಲಿ ಹುಟ್ಟುತ್ತದೆ... ಚರ್ಮ, ನರ, ಮಾಂಸ, ಮನಸು ಯಾವುದರಲ್ಲಿ ಹರಿಯುತ್ತದೆ ಬಗೆಹರಿಯದ ಬಾಬತ್ತಾಗಿತ್ತು. ಬಿಸಿಯಾ.. ಮೆತ್ತಗಾ... ರುಚಿಯಾ... ಊಹೂಂ; ವಿಚಾರಾನೆ ಮಾಡಬಾರದು ಅನ್ನುವ ನಿಲುವಿಗೆ ಬಂದುಬಿಡುತ್ತಿದ್ದ.

ಮರದ ಹಿಂದೆ ಹತ್ತುಮಾರು ದೂರದ ಬೈನೆಮರದಡಿ ದೊಡ್ಡೀರ್ಯ ಪದ್ಮಾಸನ ಹಾಕಿ ಕುಳಿತ. ಹೆಂಡತಿ ಸುಗಣಿ ತಂದುಕೊಟ್ಟ ಪರಿಕರಗಳನ್ನೆಲ್ಲ ತೆಗೆದಿರಿಸಿಕೊಂಡು ನೆಲಶುದ್ಧಿ ಮಾಡಿ ಮಂಡಲ ಬರೆದ. ತೆಂಗಿನಕಾಯಿ ಇಟ್ಟು ಹೂವು ಕುಂಕುಮಗಳಿಂದ ಪೂಜಿಸಿ ಕಣ್ಣು ಮುಚ್ಚಿ ಪಿಸುದನಿಯಲ್ಲಿ ಮಂತ್ರ ಹೇಳತೊಡಗಿದ. ಅರ್ಧತಾಸಾದ ಮೇಲೆ ಗಂಗಿಯನ್ನು ಎದುರು ಕೂಡಿಸಿ ಮಂಡಲವನ್ನು ನೋಡಲು ಹೇಳಿ ಮತ್ತೆ ಕಣ್ಣುಮುಚ್ಚಿ ಧ್ಯಾನಿಸಲು ಹತ್ತಿದ. ಮದುವೆಯಾದ ಗಂಗಿಗೆ ಗರ್ಭ ನಿಲ್ಲುತ್ತಿರಲಿಲ್ಲ. ಐದಾರು ಬಾರಿಯಾಗಿ ನಿತ್ರಾಣವಾಗಿತ್ತು. ಆಗಾಗ ಜ್ವರ ಬರುತ್ತ ಒಮ್ಮೊಮ್ಮೆ ಮನೆಯವರನ್ನೂ ಗುರುತಿಸುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಕಣ್ಣು ತೆರೆದ ದೊಡ್ಡೀರ್ಯ ಒಮ್ಮೆ ಹೂಂಕರಿಸಿದ. ಅವನ ದೃಷ್ಟಿ ದೂರದಿಗಂತದಲ್ಲಿ ಯಾವುದರ ಜೊತೆಗೋ ಲೀನವಾದಂತಿತ್ತು. ಸಣ್ಣಕೆ ತಲೆಯ ನಡುಕ ಸುರುವಾದ್ದು ಕ್ರಮೇಣ ಇಡೀಶರೀರ ಕಂಪಿಸತೊಡಗಿತು. ‘ಹ್ಹ ಹ..ಹ್ಹ ಹ..ಹ್ಹ ಹ.. ಹ್ಹ..ಹ್ಹ...’ ಕಂಪನದೊಂದಿಗೆ ಸ್ವರ ಹೊಮ್ಮತೊಡಗಿತು. ಎಲ್ಲಾ ಸ್ತಬ್ಧರಾಗಿ ಕಾತರದಿಂದ ಕುಳಿತರು.